

**ಕರುಣಾಳು ಬಾ ಬೆಳಕೆ...**
‘ವಿಶ್ವ ಕ್ಷಯ ರೋಗ ದಿನ’ ಕಾರ್ಯಕ್ರಮದಲ್ಲಿ ಕ್ಷಯ ರೋಗ ಮುಕ್ತ ವಿಶ್ವ ನಿರ್ಮಾಣಕ್ಕೆ ಆಗ್ರಹಿಸಿ ವಿದ್ಯಾರ್ಥಿಗಳು ಮೇಣದ ಬತ್ತಿ ಬೆಳಗಿಸುತ್ತಿರುವುದು.



DRTB ಚಿಕಿತ್ಸಾ ವಾರ್ಡ್



ಕ್ಷಯರೋಗಕ್ಕೆ ದಿನವಹಿ ನೀಡುವ ಮಾತ್ರೆಗಳು




CBNAAT ಯಂತ್ರ

ಈ ಕಾಯಿಲೆಯನ್ನು ನಿರ್ಮೂಲನಗೊಳಿಸಲು ಕಾಲ ಕಾಲಕ್ಕೆ ಜಾರಿಯಾದ ಕಾರ್ಯತಂತ್ರಗಳನ್ನು ಪರಿಸ್ಥಿತಿಗೆ ತಕ್ಕಂತೆ ಸುಧಾರಣೆ ಮಾಡಲಾಗಿದೆ.

### ಶ್ವಾಸಕೋಶದ ಕ್ಷಯರೋಗದ ಲಕ್ಷಣಗಳು:

- ಕಫ ಸಹಿತ ಕೆಮ್ಮು ಎರಡು ವಾರಕ್ಕಿಂತ ಹೆಚ್ಚು.
- ಸಂಜೆಯ ವೇಳೆ ಜ್ವರ.
- ಕೆಮ್ಮಿದಾಗ ಎದೆನೋವು.
- ಕಫದಲ್ಲಿ ರಕ್ತ ಬೀಳುವುದು.
- ಹಸಿವಾಗದಿರುವುದು.
- ತೂಕ ಕಡಿಮೆ ಆಗುವುದು.

### ಶ್ವಾಸಕೋಶೇತರ ಕ್ಷಯದ ಲಕ್ಷಣಗಳು:

- ರಸ ಗ್ರಂಥಿಗಳ ಕ್ಷಯ: ಕುತ್ತಿಗೆಗಳ ಊತ, ಕೀವು ಸುರಿತ ಅಥವಾ ಸುರಿತ ಇಲ್ಲದಿರುವುದು.
- ಮೆದುಳು ಕ್ಷಯ (ಟಿ.ಬಿ. ಮನೆಂಜೈಟಿಸ್): ತಲೆನೋವು, ಜ್ವರ–ಮಂಪರು, ಮಾನಸಿಕ ಅಸ್ವಸ್ಥತೆ, ಕುತ್ತಿಗೆ ಗಟ್ಟಿಯಾಗುವುದು.
- ಬೆನ್ನು ಹುರಿಯ ಕ್ಷಯ: ಬೆನ್ನುನೋವು, ಜ್ವರದ ಜೊತೆಗೆ ಬೆನ್ನು ಹುರಿಯ ಊತ.
- ಮೂಳೆಗಳ ಕ್ಷಯ.

### ಯಾರಿಗೆ ಹೆಚ್ಚು ಅಪಾಯ?

ಮಾದಕ ವಸ್ತುಗಳ ವ್ಯಸನಿಗಳು (ತಂಬಾಕು ಸೇವನೆ, ಮದ್ಯಪಾನ ಮತ್ತು ಧೂಮಪಾನ ಮಾಡುವವರು), ಎಚ್.ಐ.ವಿ. ಸೋಂಕಿತರು, ನಿರಾಶ್ರಿತರು, ಆರೋಗ್ಯ ಸಿಬ್ಬಂದಿ, ಮಧುಮೇಹಿಗಳು ಹಾಗೂ ಮಕ್ಕಳು.

### ಕ್ಷಯರೋಗವನ್ನು ಕಂಡುಹಿಡಿಯುವ ವಿಧಾನಗಳು:

- ಕ್ಷಯರೋಗವನ್ನು ಸೂಕ್ಷ್ಮದರ್ಶಕಯಂತ್ರದ ಮುಖಾಂತರ ಕಫದಲ್ಲಿನ ಕ್ಷಯದ ರೋಗಾಣುವನ್ನು ಕಂಡುಹಿಡಿಯಲಾಗುತ್ತದೆ.
- ಎಕ್ಸರೇ (XRay) ಮೂಲಕ ತಪಾಸಣೆ ಮಾಡಲಾಗುತ್ತದೆ.
- ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು CBNAAT ಮುಖಾಂತರ ಪತ್ತೆಹಚ್ಚಲಾಗುವುದು.
- ವೈದ್ಯಕೀಯ ರೋಗ ನಿರ್ಣಯ (Clinically Diagnosed).